# ಮೈಸೂರು ಮಹಾನಗರ ಪಾಲಿಕೆ

ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ ಸಭೆಯ ನಡವಳಿ, ಮೈಸೂರು.

ಸಭೆಯ ದಿನಾಂಕ : 21-10-2009.

ಸಭೆಯ ವೇಳೆ : ಬೆಳಿಗ್ಗೆ 9.00 ಕ್ಕೆ

ಅಧ್ಯಕ್ಷತೆ : ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಅಧಿಕಾರಿಗಳು,

| ಕ್ರ. ಸಂ. | ಹಾಜರಿದ್ದವರು | ಕ್ರ. ಸಂ. | ಹಾಜರಿದ್ದವರು |
|---|---|---|---|
| 1. | ಶ್ರೀ ಪುರುಷೋತ್ತಮ, ಮಾನ್ಯ ಮಹಾಪೌರರು, ಮೈನಪಾ | 28. | ಶ್ರೀ ಜಯಶಂಕರ್‌ಸ್ವಾಮಿ, ನಗರಪಾಲಿಕೆ ಸದಸ್ಯರು |
| 2. | ಶ್ರೀಮತಿ ಶಾರದಮ್ಮ, ಮಾನ್ಯ ಉಪಮಹಾಪೌರರು, ಮೈನಪಾ | 29. | ಶ್ರೀ ಹೆಚ್.ಎನ್.ಶ್ರೀಕಂಠಯ್ಯ, ನಗರಪಾಲಿಕೆ ಸದಸ್ಯರು |
| 3. | ಶ್ರೀ ಕೆ.ಎಸ್. ರಾಯ್ಕರ್, ಆಯುಕ್ತರು, ಮೈನಪಾ | 30. | ಶ್ರೀ ಬಿ.ಎಲ್.ಭೈರಪ್ಪ, ನಗರಪಾಲಿಕೆ ಸದಸ್ಯರು, |
| 4. | ಶ್ರೀ ಜಯಣ್ಣ, ಆಯುಕ್ತರು, ಮೂಡಾ | 31. | ಶ್ರೀ ಡಿ. ಪದ್ಮನಾಭ್, ಅಧ್ಯಕ್ಷರು, ಜಿಲ್ಲಾ ಪ್ಲಾನಿಂಗ್ ಕಮಿಟಿ |
| 5. | ಶ್ರೀ ಎಸ್.ಟಿ.ದೇವರಾಜು, ಉಪ ಆಯುಕ್ತರು, ಮೈನಪಾ | 32. | ಶ್ರೀಮತಿ ಶೋಭಾಭಟ್, ಮಾನವ ಸಂಪನ್ಮೂಲ ಅಧಿಕಾರಿ |
| 6. | ಶ್ರೀ ಬಿ.ಕೆ. ಸುರೇಶ್‌ಬಾಬು, ಅಇಂ, ಮೈನಪಾ | 33. | ಶ್ರೀ ಶರತ್ ಹೆಚ್.ಎಸ್, ಐ.ಟಿ. ಆಫಿಸರ್, ಜೆಎನ್‌ನರ್ಮ್ |
| 7. | ಶ್ರೀ ಶಿವಕುಮಾರ್, ಅಇಂ, ಮೂಡಾ | 34. | ಶ್ರೀ ಚಿದಂಬರ್ ಬಿ.ಎಸ್, ಪಿ.ಹೆಚ್.ಇ, ಜೆಎನ್‌ನರ್ಮ್ |
| 8. | ಶ್ರೀ ಮಹೇಶ್, ಅಇಂ, ಮೈನಪಾ | 35. | ಶ್ರೀ ಎಂ. ಲಕ್ಷ್ಮಣ್, ಸಂಚಾಲಕರು, ಎ.ಸಿ.ಐ.ಸಿ.ಎಂ. |
| 9. | ಡಾ. ಟಿ.ಎಸ್. ನಾಗರಾಜು, ಆರೋಗ್ಯಾಧಿಕಾರಿಗಳು, ಮೈನಪಾ | 36. | ಶ್ರೀ ರಾಮದಾಸ್, ಯೋಜನಾ ಸಂಚಾಲಕರು, ಎ.ಎಂ.ಸಿ.ಎ |
| 10. | ಶ್ರೀ ಎಂ.ಎನ್ ಶ್ರೀನಿವಾಸ್, ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕೆ.ಎಸ್.ಆರ್.ಟಿ.ಸಿ | 37. | ಶ್ರೀ ಆರ್.ವಿ. ರವಿ, ಸಿನಿಯರ್ ಜನರಲ್ ಮ್ಯಾನೇಜರ್, ಎನ್.ಸಿ.ಸಿ.ಎಲ್. |
| 11. | ಶ್ರೀ ಎಸ್.ಎ. ಚಂದ್ರಕಾಂತ್, ಕಾಅ, ನರ್ಮ್ | 38. | ಶ್ರೀ ಡಿ. ಮಲ್ಲಿಕಾರ್ಜುನ, ಪ್ರಾಜೆಕ್ಟ್ ಮ್ಯಾನೇಜರ್, ಎನ್.ಸಿ.ಸಿ.ಎಲ್ |
| 12. | ಶ್ರೀ ಹೊನ್ನೇಗೌಡ, ಕಾಅ., ಕೆಯುಡಬ್ಲ್ಯೂಎಸ್ & ಡಿಬಿ | 39. | ಶ್ರೀ ಬಾಲು ಪಿ. ರೆಡ್ಡಿ, ಪ್ರಾಜೆಕ್ಟ್ ಮ್ಯಾನೇಜರ್, ಜಿ.ಕೆ.ಸಿ ಪ್ರಾಜೆಕ್ಟ್ |
| 13. | ಶ್ರೀ ನಾಗರಾಜಮೂರ್ತಿ, ಕಾಅ, ಕೆ.ಎಸ್.ಆರ್.ಟಿ.ಸಿ | 40. | ಶ್ರೀ ಬಾಲಕೃಷ್ಣ, ಸಿ.ವಾಯ್.ಪಿ.ಎಂ.ಜಿ.ಕೆ.ಸಿ. ಯೋಜನೆ |
| 14. | ಶ್ರೀ ಡಿ. ಬಿಳಿಗಿರಿರಂಗಸ್ವಾಮಿ, ಕಾಅ, ಕೆ.ಎಸ್.ಸಿ.ಬಿ | 41. | ಶ್ರೀ ಎ. ಘೋಷ್, ಚೀಫ್ (ಒ & ಎಂ), ಜಸ್ಕೋ |
| 15. | ಶ್ರೀಮತಿ ಎಂ.ವಿ. ಸುಧಾ ಯೋಜನಾ ನಿರ್ದೇಶಕರು, ಡಿ.ಯು.ಡಿ.ಸಿ. | 42. | ಶ್ರೀ ಆರ್. ಪುರೋಹಿತ್, ಚೀಫ್, ಜಸ್ಕೋ |
| 16. | ಶ್ರೀ ರಾಮಚಂದ್ರಯ್ಯ,ಸಕಾಇಂ,ಕೆಯುಡಬ್ಲ್ಯೂಎಸ್& ಡಿಬಿ | 43. | ಶ್ರೀ ಡಿ.ಆರ್.ರಂಗೇಗೌಡ,ಪ್ರಾಜೆಕ್ಟ್‌ಮ್ಯಾನೇಜರ್, ಎನ್.ಸಿ.ಸಿ.ಎಲ್ |
| 17. | ಶ್ರೀ ಎ.ಎನ್.ಪ್ರಸಾದ್, ಸಕಾಇಂ, ಮೈನಪಾ | 44. | ಶ್ರೀ ಸಿ.ಎ. ರಂಗರಾಜ್, ಯೋಜನಾ ಸಂಚಾಲಕರು, ಮೆ॥ ಸ್ಕಿಲ್‌ಟೆಕ್ ಇಂಜಿನಿಯರ್ಸ್ ಮತ್ತು ಗುತ್ತಿಗೆದಾರರು |
| 18. | ಶ್ರೀ ರಾಮಕೃಷ್ಣ, ಸಕಾಇಂ, ಮೈನಪಾ | 45. | ಶ್ರೀ ಮಧುಕರ್ ಜಿ. ಯೋಜನಾ ನಿರ್ದೇಶಕರು, Horse Hertigae Revival Project |
| 19. | ಶ್ರೀ ಎಂ.ವಿ. ಶ್ರೀಧರ್, ಸಕಾಇಂ, ಮೈನಪಾ | 46. | ಶ್ರೀ ಈರ್ಷಾಸ್‌ಹುಸೇನ್, ಆರ್ಕಿಟೆಕ್ಟ್, ಪಿ.ಯು.ಟಿ. ಕನ್ಸ್‌ಟ್ರಕ್ಷನ್ಸ್ |
| 20. | ಶ್ರೀ ಬಿ.ಸಿ.ಕುಮಾರ್, ಸಕಾಅ, ಕೆ.ಎಸ್.ಆರ್.ಟಿ.ಸಿ | 47. | ಶ್ರೀ ಆರ್. ಪಿ.ಅಗರ್‌ವಾಲ್, ಜನರಲ್ ಮ್ಯಾನೇಜರ್, ಮೆ॥ ಪ್ರತ್ಯೂಷ ಅಸೋಸಿಯೇಷನ್. |
| 21. | ಶ್ರೀ ಬಿ.ಎಂ.ಕಪನಿಗೌಡ, ಸಕಾಅ, ಕೆ.ಎಸ್.ಸಿ.ಬಿ | 48. | ಶ್ರೀ ಶಿವಕುಮಾರ್, ಪಿಎಂ, ಮೆ॥ ಪ್ರತ್ಯೂಷ ಅಸೋಸಿಯೇಟ್ಸ್ |
| 22. | ಶ್ರೀ ರಾಮಕೃಷ್ಣ ಬಿ.ಎನ್, ಸಕಾಇಂ, ನರ್ಮ್ | 49. | ಶ್ರೀ ಆರ್. ದಾಸು, ಕಾರ್ಯದರ್ಶಿಗಳು, ಮೈಸೂರು ಕೊಳಚೆ ನಿವಾಸಿಗಳ ಒಕ್ಕೂಟ |
| 23. | ಶ್ರೀ ಆರ. ನರಸಿಂಹಮೂರ್ತಿ, ಸಕಾಇಂ, ನರ್ಮ್ | 50. | ಶ್ರೀ ಪರಿಮಳ ಹೆಚ್.ಎ. ಯೋಜನಾ ಅಭಿಯಂತರರು, ಪಿ.ಜಿ. ಶೆಟ್ಟಿ ಕನ್ಸ್‌ಟ್ರಕ್ಷನ್ಸ್, ಕ.ಕೊ.ನಿ.ಮ |
| 24. | ಶ್ರೀ ಎಂ.ಆರ್.ರಾಘವೇಂದ್ರ, ಸಕಾಇಂ, ನರ್ಮ್ | 51. | ಶ್ರೀ ಜಿ.ವಿ. ಕೃಷ್ಣ, ನಾಗರೀಕ ಸಮಿತಿ ಮುಖ್ಯಸ್ಥರು, |
| 25. | ಶ್ರೀ ಆಯೂಬ್ ಖಾನ್ ಮಾಜಿ ಮಹಾಪೌರರು | 52. | ಶ್ರೀ ಕಾರ್ಯಪ್ಪ, ನಾಗರೀಕ ಸಮಿತಿ ಮುಖ್ಯಸ್ಥರು, |
| 26. | ಶ್ರೀ ನಾರಯಣ ಮಾಜಿ ಮಹಾಪೌರರು | 53. | ಶ್ರೀ ಗಂಗಾಧರಪ್ಪಾ ನಾಗರೀಕ ಸಮಿತಿ ಮುಖ್ಯಸ್ಥರು, |
| 27. | ಶ್ರೀ ಸಂದೇಶ್ ಸ್ವಾಮಿ ನಗರಪಾಲಿಕೆ ಸದಸ್ಯರು | 54. | ಶ್ರೀ ಕುಮಾರ್, ನಾಗರೀಕ ಸಮಿತಿ ಮುಖ್ಯಸ್ಥರು, |

| | | |
|---|---|---|
| ಹಿಂದಿನ ಸಭೆಯ ದಿನಾಂಕ | : | 07/10/09 |
| ಮುಂದಿನ ಸಭೆಯ ದಿನಾಂಕ | : | 04/11/09 |
| ಮುಂದಿನ ಸಭೆಯ ವೇಳೆ | : | ಬೆಳಿಗ್ಗೆ 9.00 ಗಂಟೆಗೆ |
| ಮುಂದಿನ ಸಭೆಯ ಸ್ಥಳ | : | ಎಂ.ಸಿ.ಸಿ ಸಭೆಯ ಸಭಾಂಗಣ, ಮೈಸೂರು |
| ತಯಾರಿಸಿದವರು | : | ಶ್ರೀ ಬಿ.ಕೆ. ಸುರೇಶ್‌ಬಾಬು |
| ಕಳುಹಿಸಿರುವುದು | : | ಶ್ರೀ ಬಿ.ಕೆ. ಸುರೇಶ್‌ಬಾಬು |

ಟಿಪ್ಪಣಿ :

- ಎಲ್ಲರೂ ಸಭೆಯ ನಡವಳಿಯ ಪ್ರತಿಯನ್ನು ಮುಂದಿನ ಸಭೆಗೆ ತರಲು ಕೋರಲಾಗಿದೆ.
- ಸಭೆಯ ನಡವಳಿಕೆಗೆ ಪಾಲನಾ ವರದಿಯನ್ನು ಮುಂದಿನ ಸಭೆ ನಡೆಯುವ 2 ದಿವಸಗಳ ಮುಂಚಿತವಾಗಿ ಸಲ್ಲಿಸುವುದು.
- ಅನುಪಾಲನಾ ವರದಿಯನ್ನು ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆ ಹಾಗೂ ಸಮನ್ವಯಾಧಿಕಾರಿ, ನರ್ಮ್ ಯೋಜನೆ ಇವರಿಗೆ ಕಳುಹಿಸಿಕೊಟ್ಟು, ಈ ಅಧಿಕಾರಿಯು ವರದಿಯನ್ನು ಕ್ರೋಢಿಕರಿಸಿ, ಈ ಕೆಳಗೆ ಸಹಿ ಮಾಡಿರುವವರಿಗೆ ಒಂದು ದಿವಸ ಮುಂಚಿತವಾಗಿ ಪರಿಶೀಲನೆಗಾಗಿ ಮಂಡಿಸುವುದು.
- ನರ್ಮ್ ಯೋಜನೆಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರಗಳನ್ನು ಮೈಸೂರು ನಗರಪಾಲಿಕೆಗೆ ಕಳುಹಿಸುವುದು.

* * * * *

ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರಪಾಲಿಕೆ (ಜೆ.ಎನ್.ಎನ್.ನರ್ಮ್), ಇವರು ಪೂಜ್ಯ ಮಹಾಪೌರರು, ಉಪ ಮಹಾಪೌರರು, ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಅಧಿಕಾರಿಗಳು, ಆಯುಕ್ತರು ಮೈಸೂರು ಮಹಾನಗರ ಪಾಲಿಕೆ, ಆಯುಕ್ತರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮತ್ತು ನಗರಪಾಲಿಕೆ ಸದಸ್ಯರು, ಎಲ್ಲಾ ಅಧಿಕಾರಿಗಳು, ಗುತ್ತಿಗೆದಾರರು, ಮಾಧ್ಯಮ ಪ್ರತಿನಿಧಿಗಳು ಮತ್ತು ಸಾರ್ವಜನಿಕರನ್ನು ಸ್ವಾಗತಿಸಿದರು.

ನರ್ಮ್ ವಿಶೇಷಅಧಿಕಾರಿಗಳು ಇವರು ಸಭೆಯ ಅಧ್ಯಕ್ಷತೆ ವಹಿಸಿ, ಕಾಮಗಾರಿ ಪ್ರಗತಿಯನ್ನು ಈ ಕೆಳಕಂಡಂತೆ ಪರಿಶೀಲಿಸಿದರು.

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | | ಷರಾ |
|---|---|---|---|---|
| 1 | ಮೈಸೂರು ನಗರದಲ್ಲಿ ನೀರು ಸರಬರಾಜು ನೆಟ್‌ವರ್ಕ್‌ನ ರೀಮಾಡಲ್ಲಿಂಗ್, ಸಿಸ್ಟಮ್ ಆಟೋಮೇಷನ್ ಮತ್ತು ಸಮಗ್ರ ನಿರ್ವಹಣಾ ವ್ಯವಸ್ಥೆ ಒದಗಿಸುವ ಯೋಜನೆ: ಯೋಜನಾ ಅಂದಾಜು ಮೊತ್ತ ರೂ.65.56 ಕೋಟಿಗಳು<br>ಯೋಜನಾ ಮುಕ್ತಾಯ ದಿನಾಂಕ:ಜನವರಿ-2010 | **2009 ಸೆಪ್ಟೆಂಬರ್ ತಿಂಗಳ ಅಂತ್ಯಕ್ಕೆ** ನಿಗಧಿಪಡಿಸಿದ್ದ ಗುರಿಯಾದ ರೂ. **63.78 ಕೋಟಿಗಳ** ಎದುರಾಗಿ ರೂ. **63.90 ಕೋಟಿಗಳ ಆರ್ಥಿಕ** ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. ಆರ್ಥಿಕ ಮತ್ತು ಭೌತಿಕ ಪ್ರಗತಿಯು ನಿಗಧಿತ ಗುರಿಗಿಂತ ಮುಂದಿರುತ್ತದೆ.<br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 54.17 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ. ಇವುಗಳಲ್ಲಿ 40.66 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿದ್ದು, 54.17 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು | **ಅಕ್ಟೋಬರ್ 15 2009ರ ಅಂತ್ಯಕ್ಕೆ** ನಿಗಧಿಪಡಿಸಿದ್ದ ಗುರಿಯಾದ ರೂ. **ಕೋಟಿಗಳ** ಎದುರಾಗಿ ರೂ. **64.77 64.84 ಕೋಟಿಗಳ ಆರ್ಥಿಕ** ಪ್ರಗತಿಯನ್ನು ಸಾಧಿಸಲಾಗಿರುತ್ತದೆ ಎಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. ಆರ್ಥಿಕ ಮತ್ತು ಭೌತಿಕ ಪ್ರಗತಿಯು ನಿಗಧಿತ ಗುರಿಗಿಂತ ಮುಂದಿರುತ್ತದೆ.<br>ಭೌತಿಕ ಪ್ರಗತಿಗೆ ಸಂಬಂಧಿಸಿದಂತೆ, ಕಾಮಗಾರಿಗೆ ಅಗತ್ಯವಿರುವ 54.17 ಕಿ.ಮಿ ಉದ್ದದ ಎಂ.ಎಸ್ ಪೈಪುಗಳಲ್ಲಿ 54.17 ಕಿ.ಮೀ ಉದ್ದದ ಪೈಪುಗಳನ್ನು ಶೇಖರಿಸಲಾಗಿರುತ್ತದೆ. ಇವುಗಳಲ್ಲಿ 42.42 ಕಿ.ಮೀ ಉದ್ದದ ಪೈಪುಗಳನ್ನು ಅಳವಡಿಸಲಾಗಿದ್ದು, 54.17 ಕಿ.ಮೀ ಉದ್ದಕ್ಕೆ ಒಳಭಾಗದ ಲೈನಿಂಗ್ ಮತ್ತು | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | | ಷರಾ |
|---|---|---|---|---|
| | | 54.17 ಕಿ.ಮೀ ಉದ್ದಕ್ಕೆ ಹೊರಭಾಗದ ಲೈನಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 23.27 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ.<br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 19.46 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 4.73 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು.<br>ಎಲ್ಲಾ 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. ಎಂದು ತಿಳಿಸಿದರು. | 54.17 ಕಿ.ಮೀ ಉದ್ದಕ್ಕೆ ಹೊರಭಾಗದ ಲೈನಿಂಗ್ ಪೂರ್ಣಗೊಳಿಸಲಾಗಿದೆ ಹಾಗೂ 26.97 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿರುತ್ತದೆ.<br>ಡಿಐ ಪೈಪುಗಳಿಗೆ ಸಂಬಂಧಿಸಿದಂತೆ, ಅಗತ್ಯವಿರುವ ಪೂರ್ಣ ಪ್ರಮಾಣದ 26.90 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಶೇಖರಿಸಲಾಗಿದ್ದು, 19.68 ಕಿ.ಮೀ ಉದ್ದಕ್ಕೆ ಪೈಪುಗಳನ್ನು ಅಳವಡಿಸಲಾಗಿದೆ. ಹಾಗೂ 4.74 ಕಿ.ಮೀ ಉದ್ದಕ್ಕೆ ಹೈಡ್ರಾಲಿಕ್ ಪರೀಕ್ಷೆಗಳನ್ನು ನಡೆಸಲಾಗಿದೆ ಎಂದು ತಿಳಿಸಿದರು.<br>ಎಲ್ಲಾ 25 ಮೇಲ್ಮಟ್ಟದ ಶೇಖರಣಾ ಟ್ಯಾಂಕುಗಳ ಕಾಮಗಾರಿಯು ವಿವಿಧ ಹಂತಗಳ ಪ್ರಗತಿಯಲ್ಲಿದೆ. ಎಂದು ತಿಳಿಸಿದರು. | |
| 2. | ಸ್ಕಾಡಾ ಯೋಜನೆ: ಅಂದಾಜು ಮೊತ್ತ: ರೂ. 5.24 ಕೋಟಿ<br>Agency: M/s. Mechatronics<br>ಅವಧಿ: 9 ತಿಂಗಳು<br>ಮುಕ್ತಾಯ ವಾಗಬೇಕಾದುದು : ಜುಲೈ-2009 | ಸಲಕರಣೆಗಳನ್ನು ನಿರ್ಮಿಸುವ, ಎರೆಕ್ಷನ್ ಮಾಡುವ ಕಾಮಗಾರಿಯು ಪೂರ್ಣಗೊಂಡಿದ್ದು, ಈ ಸಂಬಂಧದ ಸಾಫ್ಟ್‌ವೇರ್ ತಯಾರಿಕಾ ಹಂತದಲ್ಲಿರುತ್ತದೆ ಎಂದು ಮತ್ತು ಡಬ್ಲ್ಯೂಟಿ.ಪಿ ಕೇಬಲ್ ಕೆಲಸವು ಪ್ರಗತಿಯಲ್ಲಿರುತ್ತದೆಯೆಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. | ಸಲಕರಣೆಗಳನ್ನು ನಿರ್ಮಿಸುವ, ಎರೆಕ್ಷನ್ ಮಾಡುವ ಕಾಮಗಾರಿಯು ಪೂರ್ಣಗೊಂಡಿದ್ದು, ಈ ಸಂಬಂಧದ ಸಾಫ್ಟ್‌ವೇರ್ ತಯಾರಿಕಾ ಹಂತದಲ್ಲಿರುತ್ತದೆ ಎಂದು ಮತ್ತು ಡಬ್ಲ್ಯೂಟಿ.ಪಿ ಕೇಬಲ್ ಕೆಲಸವು ಪ್ರಗತಿಯಲ್ಲಿರುತ್ತದೆಯೆಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. | |
| 3. | 24 x 7 ನೀರು ಸರಬರಾಜು<br>ಪಶ್ಚಿಮ ವಲಯ: ಅಂದಾಜುಮೊತ್ತ 56.07 ಕೋಟಿ ರೂ. ಸಿಎಸ್‌ಆರ್, ಕುವೆಂಪುನಗರ ಹೆಚ್.ಎಲ್.ಆರ್ ವಲಯದ ಭಾಗಶ: ವಲಯಗಳು ಮತ್ತು ಪೂರ್ವವಲಯ ಹೆಚ್.ಎಲ್.ಆರ್ ವಲಯದ ಭಾಗಶ: ಅಂದಾಜುಮೊತ್ತ 45.84 ಕೋಟಿ ರೂ. ಜರ್ಮನ್ ಪ್ರೆಸ್, ದೇವನೂರು, ಬಳ್ಳಾಲ್ ವೃತ್ತ | ಜಸ್ಕೋ ಕಂಪನಿಯವರು ಮೈಸೂರಿನ ಯೋಜನಾ ಮತ್ತು ಸಂಸ್ಥೆಯ ಸಂಘಟನೆ ಕುರಿತು ಪ್ರಾತ್ಯಕ್ಷತೆಯನ್ನು ನೀಡಿದರು. | ಎಲ್ಲಾ ನಗರಪಾಲಿಕೆಯ ಸದಸ್ಯರುಗಳು ಜಸ್ಕೋ ಕಂಪನಿಯು ದೂರುಗಳನ್ನು 24 ಗಂಟೆಯೊಳಗೆ ಸಮರ್ಪಕವಾಗಿ ನಿರ್ವಹಿಸದೆ ಬದಲಿಗೆ 2–3 ದಿನಗಳು ತೆಗೆದುಕೊಳ್ಳುತ್ತಿರುವುದಕ್ಕೆ ತಮ್ಮ ಅಸಮಾಧನ ವ್ಯಕ್ತಪಡಿಸಿದರು. ಇದಕ್ಕೆ ಪ್ರತ್ಯುತ್ತರವಾಗಿ ಜನರಲ್ ಮ್ಯಾನೇಜರ್ ಜಸ್ಕೋರವರು ಎಲ್ಲಾ ಜಸ್ಕೋ ಸಿಬ್ಬಂದಿ ನಗರಪಾಲಿಕೆಯ ಎಲ್ಲಾ ಸದಸ್ಯರೊಂದಿಗೆ ನಿರಂತರ ಸಂಪರ್ಕಸುತ್ತಿರುವುದಲ್ಲದೆ ಜಸ್ಕೋ ಇಂಜಿನಿಯರ್ಸ್ ಮತ್ತು ವಿ.ವಿ. ವಾಟರ್ ವರ್ಕ್ಸ್ ಇಂಜಿನಿಯರ್ಸ್‌ಗಳು ಕಾಮಗಾರಿ ಸ್ಥಳಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದೂರುಗಳ ಬಗ್ಗೆ ಗಮನ ಹರಿಸಿ, | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | | ಷರಾ |
|---|---|---|---|---|
| | ವಲಯಗಳು ಮತ್ತು ಹೆಚ್.ಎಲ್.ಆರ್ ವಲಯದ ಭಾಗಶ:<br><br>ಮುಕ್ತಾಯವಾಗಬೇಕಾದುದು: Jan-2013 | | ತೊಂದರೆಗಳನ್ನು ಬಗೆ ಹರಿಸುತ್ತಿರುವುದಾಗಿ ತಿಳಿಸಿದರು.<br><br>ನಗರದಲ್ಲಿ ನಿಜವಾದ ತೊಂದರೆ ಇರುವ ಕೆಲವು ಭಾಗವಿದ್ದು, ಅಂತಹ ಪ್ರದೇಶಗಳಿಗೆ ಆಧ್ಯತೆ ನೀಡಿ ತೊಂದರೆಗಳನ್ನು 24 ಗಂಟೆಗಳಲ್ಲಿ ಬಗೆ ಹರಿಸಲು ಕ್ರಮ ಕೈಗೊಳ್ಳಲು ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ ಇವರು ಸೂಚಿಸಿದರು.<br><br>ಜಸ್ಕೋದವರ ಮುಖ್ಯ ಉದ್ದೇಶಕ್ಕೆ ಬದ್ದರಾಗಿ ಕಾಮಗಾರಿಯ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಹಾಗೂ ಸಾರ್ವಜನಿಕರು ಮತ್ತು ನಗರಪಾಲಿಕೆ ಸದಸ್ಯರುಗಳ ದೂರುಗಳನ್ನು ಬಗೆ ಹರಿಸಲು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದರು.<br><br>ನೀರು ಸರಬರಾಜು ವ್ಯವಸ್ಥೆಗೆ ಸರಬರಾಜುಗೆ ಸಂಬಂಧಿಸಿದಂತೆ ತೊಂದರೆಗಳನ್ನು ನಿವಾರಿಸಲು ಜಸ್ಕೋದವರು ನಗರಪಾಲಿಕೆ ಸದಸ್ಯರೊಂದಿಗೆ ಸಭೆಗಳನ್ನು ನಡೆಸುತ್ತಿಲ್ಲವೆಂದು ಶ್ರೀ ಲಕ್ಷ್ಮಣ್ ಸಂಚಾಲಕರು ಎ.ಸಿ.ಐ.ಸಿ.ಎಂ. ಇವರು ತಿಳಿಸಿದರು.<br><br>ಇದಕ್ಕೆ ಉತ್ತರವಾಗಿ ಜನರಲ್ ಮ್ಯಾನೇಜರ್ ಜಸ್ಕೋ ಇವರು ದಸರಾ ಹಬ್ಬದ ಹಿನ್ನಲೆಯಲ್ಲಿ ಸಭೆಗಳನ್ನು ನಡೆಸಲು ಸಾಧ್ಯವಾಗಿರುವುದಿಲ್ಲವೆಂದು ಮತ್ತು ಸಧ್ಯದಲ್ಲೇ ಎಲ್ಲಾ ನಗರಪಾಲಿಕೆಯ ಸದಸ್ಯರುಗಳೊಂದಿಗೆ ಸಭೆನಡೆಸಲು ಸೂಕ್ತ ವ್ಯವಸ್ಥೆ ಮಾಡುವುದಾಗಿ ಮತ್ತು ಅವರ ದೂರುಗಳನ್ನು ಆಲಿಸುವುದಾಗಿ ಭರವಸೆ ನೀಡಿದರು.<br><br>ನಗರ ನೀರು ಸರಬರಾಜು ವಿತರಣೆಯನ್ನು ಹೆಚ್ಚು ಸಮರ್ಪಕವಾಗಿ ಹಾಗೂ ಪರಿಣಾಮಕಾರಿಯಾಗಿ ನಿರ್ವಹಿಸಲು ಜಸ್ಕೋ ಕಂಪನಿಗೆ ವಹಿಸಲಾಗಿದ್ದು, ಆದರೆ ಜಸ್ಕೋದವರ ಪ್ರಗತಿಯು ಸಮರ್ಪಕವಾಗಿರವುದಿಲ್ಲವೆಂದು ಮತ್ತು ಸಮಧಾನಕರವಾಗಿಲ್ಲವೆಂದು ಶ್ರೀ ಶ್ರೀಂಕಠಯ್ಯ ತಿಳಿಸಿದರು.<br><br>ನೀರು ಸರಬರಾಜು ಯೋಜನೆಯು ಒಂದು ಮುಖ್ಯ ಯೋಜನೆ ಆಗಿದ್ದು, | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | | ಷರಾ |
|---|---|---|---|---|
| | | | ಇದನ್ನು ಸಮರ್ಪಕವಾಗಿ ಬಳಸಿಕೊಳ್ಳಬೇಕೆಂದು ಶ್ರೀ ಲಕ್ಷ್ಮಣ್ ಸಂಚಾಲಕರು ಎ.ಸಿ.ಐ.ಸಿ.ಎಂ. ತಿಳಿಸಿದರು ಹಾಗೂ ಯಾವುದೇ ತಾಂತ್ರಿಕ ಉಪಸಮಿತಿಯನ್ನು ರಚಿಸಿಲ್ಲವೆಂದು ಮತ್ತು ಮೂರನೇ ಸಂಸ್ಥೆಯಿಂದ ಪರಿವೀಕ್ಷಣೆ ನಡೆಸಿಲ್ಲವೆಂದು ಎಂದು ತಿಳಿಸಿದರು.<br>ಇದಕ್ಕೆ ಉತ್ತರವಾಗಿ ಆಯುಕ್ತರು, ಮೈಸೂರು ಮಹಾನಗರ ಪಾಲಿಕೆ ಇವರು ತಾಂತ್ರಿಕ ಸಮಿತಿ ರಚಿಸುವ ಸಲುವಾಗಿ ಪತ್ರಿಕೆಗಳಲ್ಲಿ ಜಾಹಿರಾತು ನೀಡಿದ್ದು ಇದಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಬಂದಿರುವುದೆಂದು ತಿಳಿಸಿದರು ಆದರೆ ಭಾರತ ಸರ್ಕಾರದ ನಿಯಮಗಳ ಪ್ರಕಾರ ಮೊದಲು Anchor NGO ಯನ್ನು ರಚಿಸಬೇಕಾಗಿರುತ್ತದೆ. ಆದ್ದರಿಂದ ತಾಂತ್ರಿಕ ಸಮಿತಿ ರಚಿಸಲು ಸಮಯವಾಗುತ್ತಿಯೆಂದು ತಿಳಿಸಿದರು. ಅಲ್ಲದೆ Anchor NGO ರಚಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದ್ದು Anchor NGO ವನ್ನು ಅಂತಿಮಗೊಳಿಸಿದ ನಂತರ ತಾಂತ್ರಿಕ ಸಮಿತಿಯನ್ನು ರಚಿಸುವುದಾಗಿ ತಿಳಿಸಿದರು.<br>3ನೇ ಸಂಸ್ಥೆಯಿಂದ ಜಸ್ಕೋ ಕಾಮಗಾರಿಗಳ ಪರಿವೀಕ್ಷಣೆಗೆ ಸಂಬಂಧಿಸಿದಂತೆ ಟೆಂಡರ್‌ಗಳನ್ನು ಕರೆಯಲಾಗಿದೆಯೆಂದು ಕಾರ್ಯಪಾಲಕ ಇಂಜಿನಿಯರ್ ಕೆ.ಯು.ಡಬ್ಲ್ಯೂ.ಎಸ್ & ಡಿಬಿ ಇವರು ತಿಳಿಸಿದರು.<br>ಸಾರ್ವಜನಿಕರು ಹಾಗೂ ಪಾಲಿಕೆ ಸದಸ್ಯರುಗಳ ದೂರುಗಳನ್ನು ಬಗೆಹರಿಸುವಲ್ಲಿ ಜಸ್ಕೋದವರ ನಿಷ್ಕ್ರಿಯತೆ ಬಗ್ಗೆ ವಿಶೇಷಾಧಿಕಾರಿಗಳು ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಈ ರೀತಿ ವರ್ತನೆಯನ್ನು ಸಹಿಸಲಾಗುವುದಿಲ್ಲವೆಂದು ಮತ್ತು ಈ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು, ಜಸ್ಕೋ ಇವರಿಗೆ ನೋಟಿಸ್ ಜಾರಿ ಮಾಡಲು ಸೂಚಿಸಿದರು. | |
| **4.** | ಮೈಸೂರು ನಗರಕ್ಕೆ ಸಗಟು ನೀರು ಸರಬರಾಜನ್ನು ಕಬಿನಿ ನದಿಯಿಂದ ತರುವ ಯೋಜನೆ:<br>ಯೋಜನೆಯ ಅಂದಾಜು | ಕಬಿನಿ ಕುಡಿಯುವ ನೀರಿನ ಯೋಜನೆ ಇನ್ನೂ ಆರಂಭವಾಗದಿಲ್ಲದಿರುವ ಬಗ್ಗೆ ಶ್ರೀ ಬಿ.ಎಲ್.ಭೈರಪ್ಪ, ನಗರಪಾಲಿಕೆ ಸದಸ್ಯರು ಇವರು ಪ್ರತಿಭಟಿಸಿ ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿದರು. ಇದಕ್ಕೆ ಉತ್ತರವಾಗಿ ವಿಜಯನಗರ, | ಕಬಿನಿ ಯೋಜನೆಯ ಶಂಕುಸ್ಥಾಪನೆಯನ್ನು ನೆರವೇರಿಸಲು ಶೀಘ್ರವಾಗಿ ದಿನಾಂಕವನ್ನು ನಿಗದಿಪಡಿಸಿ ಕಾಮಗಾರಿಗಳನ್ನು ಪ್ರಾರಂಭಿಸುವಂತೆ ಶ್ರೀ ಭೈರಪ್ಪ, ನಗರಪಾಲಿಕೆ ಸದಸ್ಯರು ಕೋರಿದರು.<br>ಈ ಸಂಬಂಧ, ಮಾನ್ಯ ಜಿಲ್ಲಾ | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | | ಷರಾ |
|---|---|---|---|---|
| | ರೂ. 108.81 ಕೋಟಿ<br>ಮುಕ್ತಾಯವಾಗಬೇಕಾದುದು<br>Jan-2012 | 4ನೇ ಹಂತದಲ್ಲಿ ಕಬಿನಿ ಕಾಮಗಾರಿಯು ಪ್ರಾರಂಭವಾಗಿದೆಯೆಂದು ಕಾರ್ಯಪಾಲಕ ಇಂಜಿನಿಯರ್, ಕೆ.ಯು.ಡಬ್ಲ್ಯೂಎಸ್ & ಡಿಬಿ ಇವರು ತಿಳಿಸಿದರು. ಇದಕ್ಕೆ ಶ್ರೀ ಬಿ.ಎಲ್.ಭೈರಪ್ಪ ರವರು ಇನ್‌ಟೇಕ್ ಪಾಯಿಂಟ್ ಹತ್ತಿರ ಪ್ರಾರಂಭದಿಂದಲೇ ಶುರು ಮಾಡಬೇಕೆಂದು ತಿಳಿಸಿದರು.<br>ಚರ್ಚೆಯ ನಂತರ, ಯೋಜನೆಯ ಶಂಕು ಸ್ಥಾಪನೆಯನ್ನು ಮಾನ್ಯ ಜಿಲ್ಲಾ ಮಂತ್ರಿಗಳು ಹಾಗೂ ಸ್ಥಳೀಯ ಶಾಸಕರಿಂದ ನೆರವೇರಿಸಲು ಸೂಕ್ತ ದಿನಾಂಕವನ್ನು ನಿಗಧಿಪಡಿಸಲು ನಿರ್ಧರಿಸಲಾಯಿತು. | ಉಸ್ತುವಾರಿ ಸಚಿವರನ್ನು ಮತ್ತು ಮಾನ್ಯ ವಿರೋಧ ಪಕ್ಷ ನಾಯಕರು ಮತ್ತು ಸ್ಥಳೀಯ ಶಾಸಕರು, ಇವರನ್ನು ಸಂಪರ್ಕಿಸಲಾಗಿದ್ದು ಇವುರುಗಳಿಂದ ದಿನಾಂಕದ ಧೃಡೀಕರಣವನ್ನು ನಿರೀಕ್ಷಿಸಲಾಗಿದೆಯೆಂದು ವಿಶೇಷಾಧಿಕಾರಿಗಳು ತಿಳಿಸಿದರು. | |
| 5. | ಮೈಸೂರು ನಗರದ 20 ಆಯ್ದ ಕೊಳಚೆ ಪ್ರದೇಶಗಳ ಪುನರ್ ವಸತಿ ಯೋಜನೆ: ಅಂದಾಜು ವೆಚ್ಚ: ರೂ. 45.27 ಕೋಟಿಗಳು.<br>ಹಂತ–೧<br>ಮುಕ್ತಾಯವಾಗಬೇಕಾದುದು<br>Jan-2012 | | ನಗರ ಸಾರಿಗೆ ಬಸ್‌ನಿಲ್ದಾಣದ ಉದ್ಘಾಟನೆಗೆ ಸಂಬಂಧಿಸಿದಂತೆ ಚರ್ಚಿಸಲಾಯಿತು. ಸಾರ್ವಜನಿಕರಿಗೆ ಬಹಳ ತೊಂದರೆಯಾಗುತ್ತಿರುವುದರಿಂದ ಆದಷ್ಟು ಬೇಗನೆ ಉದ್ಘಾಟನೆಗೆ ವ್ಯವಸ್ಥೆ ಮಾಡುವಂತೆ ಶ್ರೀ ಸಂದೇಶಸ್ವಾಮಿ ಮತ್ತು ಶ್ರೀ ಆಯೂಬ್‌ಖಾನ್, ನಗರಪಾಲಿಕೆ ಸದಸ್ಯರುಗಳು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.<br>ನಗರ ಬಸ್‌ನಿಲ್ದಾಣವನ್ನು ಉದ್ಘಾಟಿಸುವಂತೆ ಕೇಂದ್ರ ಸರ್ಕಾರದ ಮಾನ್ಯ ನಗರಾಭಿವೃದ್ಧಿ ಸಚಿವರನ್ನು ಸಂಪರ್ಕಿಸಲಾಗಿದ್ದು ಮಾನ್ಯ ಸಚಿವರಿಂದ ದಿನಾಂಕದ ದೃಢೀಕರಣವನ್ನು ನಿರೀಕ್ಷಸಲಾಗಿದೆಯೆಂದು, ಜಿಲ್ಲಾಧಿಕಾರಿಗಳು ಮತ್ತು ನರ್ಮ್ ವಿಶೇಷಾಧಿಕಾರಿಗಳು ತಿಳಿಸಿದರು. ಹಾಗೂ ಈ ನಿಟ್ಟಿನಲ್ಲಿ ತುರ್ತು ಸೂಕ್ತ ಕ್ರಮ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದರು. | |
| 6. | 1.ಮೈಸೂರು–ಬೆಂಗಳೂರು ರಸ್ತೆಯಿಂದ ಮೈಸೂರು–ನಂಜನಗೂಡುವರೆಗೆ 2 ಪಥದ ಹೊರ ವರ್ತುಲದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು | | ದಿನಾಂಕ 22.10.2009 ರಂದು ಕೊಳಚೆ ನಿರ್ಮೂಲನಾ ಮಂಡಳಿಯ ಕಾಮಗಾರಿಯ ಪರಿವೀಕ್ಷಣೆಯನ್ನು ಪೂಜ್ಯ ಮಾಹಪೌರರು ಹಾಗೂ ಎಲ್ಲಾ ಪಾಲಿಕೆ ಸದಸ್ಯರುಗಳ ಜೊತೆ ನಡೆಸಲು ನಿರ್ಧರಿಸಲಾಯಿತು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | | ಷರಾ |
|---|---|---|---|---|
| | (0+0.25 ಕಿ.ಮಿ ಪಶ್ಚಿಮದ ಕಡೆಗೆ) 2. ಮೈಸೂರು-ಬೆಂಗಳೂರು ಹೊರ ವರ್ತುಲ ರಸ್ತೆಯಿಂದ- ಮೈಸೂರು ಬನ್ನೂರು ರಸ್ತೆವರೆಗೆ 4 ಪಥದ ರಸ್ತೆಯನ್ನು ಸರ್ವೀಸ್ ರಸ್ತೆಯೊಂದಿಗೆ 6 ಪಥದ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವುದು (0 ಯಿಂದ 7.49 ಕಿ.ಮಿ ಪೂರ್ವದ ಕಡೆಗೆ)<br>ಅಂದಾಜು ವೆಚ್ಚ: ರೂ. 219.03 ಕೋಟಿಗಳು. ಅನುಮೋದಿಸಿದ ದಿ: 15-2-2008 | | | |
| 7. | ಮೈಸೂರು ನಗರದ ಸಾರಿಗೆ ವ್ಯವಸ್ಥೆಗೆ ಮೂಲಭೂತ ಸೌಕರ್ಯ ಒದಗಿಸುವುದು.<br>ಯೋಜನಾ ವೆಚ್ಚ: ರೂ 85.25 ಕೋಟಿಗಳು. ಗುತ್ತಿಗೆ ಪ್ರೀಮಿಯಂ: 17.50% ಮೇಲ್ಪಟ್ಟು (ರೂ108.59 ಕೋಟಿ) ಗುತ್ತಿಗೆ ಅವಧಿ: ಮಾನ್ಸೂನ್ ಬಿಟ್ಟು 18 ತಿಂಗಳು (3 ತಿಂಗಳು ಮಾನ್ಸೂನ್ ಕಾಲ) | ಚರ್ಚೆಯಾಗಿರುವುದಿಲ್ಲ. | ಸರ್ಕಾರದಿಂದ ಕಾಮಗಾರಿಗಳಿಗೆ ಹೊಸದಾಗಿ ಟೆಂಡರ್ ಕರೆಯಲು ನಿರ್ದೇಶನ ಬಂದಿದ್ದು ಅದರಂತೆ ಹೊಸದಾಗಿ ಟೆಂಡರ್ ಕರೆಯಲು ಕ್ರಮ ಕೈಗೊಳ್ಳುತ್ತಿರುವುದಾಗಿ ಆಯುಕ್ತರು, ಮೂಡಾ ಇವರು ತಿಳಿಸಿದರು.<br>ಅವಧಿಯನ್ನು ಕಡಿಮೆಗೊಳಿಸಿ ಟೆಂಡರ್‌ಗಳನ್ನು ತುರ್ತಾಗಿ ಕರೆಯಲು ಕ್ರಮ ಕೈಗೊಳ್ಳಲು ವಿಶೇಷಾಧಿಕಾರಿಗಳು ಸೂಚಿಸಿದರು. | |
| 8. | ದೊಡ್ಡ ಮಳೆನೀರು ಚರಂಡಿ ಪುನರ್ ನಿರ್ಮಾಣ<br>ಅಂದಾಜು ಮೊತ್ತ: ರೂ 384.60 ಕೋಟಿಗಳು (ಸದ್ಯಕ್ಕೆ ರೂ 125.00 ಕೋಟಿಗೆ ಮಿತಿಗೊಳಿಸಲಾಗಿದೆ)<br>ಮುಕ್ತಾಯವಾಗಬೇಕಾದುದು<br>ಡಿಸೆಂಬರ್ 2010. | ದೊಡ್ಡ ಮಳೆ ನೀರು ಚರಂಡಿ ಪುನರ್ ನಿರ್ಮಾಣ ಕಾಮಗಾರಿಯ ಯೋಜನಾ ವರದಿಯನ್ನು ತಯಾರಿಸಿರುವ ಸ್ಟೂಪ್ ಕನ್ಸಲ್ಟೆಂಟ್ ಸಂಸ್ಥೆಯ ಪ್ರತಿನಿಧಿಗಳು ಯೋಜನಾ ವರದಿ ಬಗ್ಗೆ ಪ್ರಾತ್ಯಕ್ಷತೆಯನ್ನು ನೀಡಿದರು.<br>ಒಟ್ಟು 6 ವ್ಯಾಲಿಗಳಲ್ಲಿ ಪ್ರಥಮ ಹಂತದಲ್ಲಿ 2 ವ್ಯಾಲಿಗಳಲ್ಲಿ ಅಂದರೆ ಬನ್ನಿಮಂಟಪ ವ್ಯಾಲಿ ಮತ್ತು ಹೆಬ್ಬಾಳುಕೆರೆ ವ್ಯಾಲಿಗಳ ಅಡಿಯಲ್ಲಿ ಬರುವ ದೊಡ್ಡ ಮಳೆ ನೀರು ಚರಂಡಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆಯೆಂದು ಅಧೀಕ್ಷಕ ಇಂಜಿನಿಯರ್, ನರ್ಮ್‌ರವರು ತಿಳಿಸಿದರು.<br>ಬನ್ನಿಮಂಟಪ ವ್ಯಾಲಿ ಕಾಮಗಾರಿಯನ್ನು 4 ಪ್ಯಾಕೇಜ್‌ಗಳಾಗಿ ವಿಂಗಡಿಸಿದ್ದು, | ಬನ್ನಿಮಂಟಪ ವ್ಯಾಲಿ ಮತ್ತು ಹೆಬ್ಬಾಳುಕೆರೆ ವ್ಯಾಲಿಗಳ ಅಡಿಯಲ್ಲಿಯ ಎಲ್ಲಾ 5 ಪ್ಯಾಕೇಜ್‌ಗಳ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ಅಧೀಕ್ಷಕ ಅಭಿಯಂತರರು, ನರ್ಮ್ ರವರು ತಿಳಿಸಿದರು. | |

| ಕ್ರ. ಸಂ. | ಯೋಜನೆಯ ಹೆಸರು | ಪ್ರಗತಿ ಸಾಧಿಸಿರುವುದು/ ಉದ್ದೇಶಿಸಿರುವುದು | | ಷರಾ |
|---|---|---|---|---|
| | | ಪ್ಯಾಕೇಜ್ 1 ಮತ್ತು 3ರ ಕಾಮಗಾರಿಯನ್ನು ಮೆ॥ ಆರ್.ಎಂ.ಎನ್ ಇನ್‌ಫ್ರಾಸ್ಟ್ರಕ್ಚರ್, ಬೆಂಗಳೂರು, ಇವರಿಗೆ ಮತ್ತು 2 ಮತ್ತು 4 ಪ್ಯಾಕೇಜ್ ಅನ್ನು ಮೆ॥ ಪ್ರತ್ಯೂಷ ಅಸೋಸಿಯೇಟ್ಸ್, ಇವರಿಗೆ ವಹಿಸಲಾಗಿದ್ದು ಹೆಬ್ಬಾಳುಕೆರೆ ವ್ಯಾಲಿ ಕಾಮಗಾರಿಯನ್ನು ಶ್ರೀ ಶಿವಕುಮಾರ್, ಗುತ್ತಿಗೆದಾರರು ಇವರಿಗೆ ವಹಿಸಲಾಗಿದೆ ಎಂದು ಅಧೀಕ್ಷಕ ಇಂಜಿನಿಯರ್, ನರ್ಮ್ ಇವರು ತಿಳಿಸಿದರು. ಎಲ್ಲಾ ಕಾಮಗಾರಿಗಳು ಪ್ರಗತಿಯಲ್ಲಿರುವುದಾಗಿ ತಿಳಿಸಿದರು.<br>ಮೇಲಿನ ಪ್ಯಾಕೇಜ್‌ಗಳ ಗುತ್ತಿಗೆದಾರರಿಗೆ ಕಾಮಗಾರಿಗಳ ಪ್ರಗತಿಯನ್ನು ಹೆಚ್ಚಿಸುವಂತೆ ಮತ್ತು ನಿಗಧಿತ ಕಾರ್ಯಕ್ರಮಕ್ಕೆ ಅನುಗುಣವಾಗಿ ಕಾಮಗಾರಿಯನ್ನು ನಿರ್ವಹಿಸುವಂತೆ ಮಾನ್ಯ ಶ್ರೀ ಸಿದ್ದರಾಜು, ವಿಧಾನ ಪರಿಷತ್ ಸದಸ್ಯರು, ಇವರು ಸೂಚಿಸಿದರು. | | |
| 9. | ಮೈಸೂರು ನಗರದ ಪಾರಂಪರಿಕ ಕಟ್ಟಡಗಳು ಹಾಗೂ ವೃತ್ತಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು. | ಚರ್ಚೆಯಾಗಿರುವುದಿಲ್ಲ | ಯೋಜನಾ ವರದಿಯನ್ನು ಕೇಂದ್ರ ಸರ್ಕಾರದ ಮಂಜೂರಾತಿ ಸಮಿತಿ ಮುಂದೆ ದಿನಾಂಕ 30.10.2009 ರಂದು ಮಂಡಿಸುವ ಸಾಧ್ಯತೆ ಇದೆ ಎಂದು ಆಯುಕ್ತರು ಮೈಸೂರು ಮಹಾನಗರ ಪಾಲಿಕೆ ತಿಳಿಸಿದರು. | |
| 10. | ಇ.ಡಬ್ಲ್ಯೂ.ಎಸ್. ಮನೆಗಳು ಮತ್ತು ಮೂಲಭೂತ ಅಭಿವೃದ್ಧಿ ಪ್ರಾಧಿಕಾರ ಲಿಮೆಟೆಡ್. ಬಿ.ಎಸ್.ಯು.ಪಿ. ಅಡಿಯಲ್ಲಿ | | 4305 ಮನೆಗಳನ್ನು ಗುರುತಿಸಿ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಫೆಬ್ರವರಿ 2009 ರಲ್ಲಿ ಸಲ್ಲಿಸಿರುವುದಾಗಿ ಆಯುಕ್ತರು ಮೈಸೂರು ಮಹಾನಗರ ಪಾಲಿಕೆ ತಿಳಿಸಿದರು.<br>ಅನುದಾನದ ಕೊರತೆಯಿಂದಾಗಿ ಕೇವಲ 1806 ಮನೆಗಳನ್ನು ಅನುಮೋದಿಸಿದ್ದು, ದಿನಾಂಕ 09.09.2009 ರಂದು ಯೋಜನಾ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಎಸ್.ಎಲ್.ಎನ್.ಎ., ಯಿಂದ ಸಲ್ಲಿಸಲಾಗಿದ್ದು, ಕೇಂದ್ರ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಲಾಗಿದೆಯೆಂದು ತಿಳಿಸಿದರು. | |

**<u>ಸಾಮನ್ಯ ಚರ್ಚೆ:</u>**

- ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಸಾರ್ವಜನಿಕರ ಮಾಹಿತಿಗಾಗಿ ಎಲ್ಲಾ ವಿವರಗಳೊಂದಿಗೆ ಮುದ್ರಿತ ಪತ್ರಗಳನ್ನು ಹಂಚುವಂತೆ ಸೂಚಿಸಲಾಯಿತು. ಎಲ್ಲಾ ಅನುಷ್ಟಾನ ಅಧಿಕಾರಿಗಳು ಈ ಸಂಬಂಧ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಲಾಯಿತು.
- ಜೆ.ಎನ್.ನರ್ಮ್ ಅಡಿಯಲ್ಲಿ 24X7 ಸಹಾಯ ಘಟಕವನ್ನು ಪ್ರಾರಂಭಿಸಲು ಸೂಚಿಸಲಾಯಿತು.
- ನಾಗರೀಕ ಸಮಿತಿಯ ಮುಖಂಡರಾದ ಶ್ರೀ ಕುಮಾರ್ ಇವರು ಸಾರ್ವಜನಿಕ ಅಡಿಯಲ್ಲಿ ಪ್ರಸ್ತಾಪಿಸಿರುವ ಯೋಜನೆಯ ಹಂತಗಳ ಬಗ್ಗೆ ವಿವರ ಕೋರಿದರು ಮತ್ತು ಈ ಸಂಬಂಧ ಸೂಕ್ತ ಮಾಹಿತಿ ದೊರೆಯದಿರುವ ಬಗ್ಗೆ ಅಸಮಾಧನ ವ್ಯಕ್ತಪಡಿಸಿದರು ಈ ಸಂಬಂಧ ಅಧೀಕ್ಷಕ ಅಭಿಯಂತರರು, ನರ್ಮ್ ಹಾಗೂ ಯೋಜನಾ ಘಟಕದ ಅಧಿಕಾರಿಗಳನ್ನು ಸಂಪರ್ಕಿಸಿ ಅವಶ್ಯ ಮಾಹಿತಿ ಪಡೆಯಲು ಸೂಚಿಸಲಾಯಿತು.

ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಜಿಲ್ಲಾಧಿಕಾರಿಗಳು ಮತ್ತು ವಿಶೇಷಾಧಿಕಾರಿಗಳು
ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ
ಮೈಸೂರು.

ಪ್ರತಿಯನ್ನು ಕೆಳಕಂಡವರಿಗೆ ಮಾಹಿತಿಗಾಗಿ ಸಲ್ಲಿಸಲಾಗಿದೆ :

1. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಮಾನ್ಯ ಸಚಿವರ ಗಮನಕ್ಕೆ ತರುವಂತೆ ಕೋರಿದೆ.
2. ಮಾನ್ಯ ಮುಖ್ಯ ಮಂತ್ರಿಗಳ ಸಂಸದೀಯ ಕಾರ್ಯದರ್ಶಿ ಹಾಗೂ ವಿದಾನಸಭೆಯ ಸದಸ್ಯರು, ಕೃಷ್ಣರಾಜ ಕ್ಷೇತ್ರ, ಮೈಸೂರು.
3. ಮಾನ್ಯ ಲೋಕಸಭಾ ಸದಸ್ಯರು, ಮೈಸೂರು ಕ್ಷೇತ್ರ, ಮೈಸೂರು.
4. ಮಾನ್ಯ ವಿಧಾನಸಭಾ ಸದಸ್ಯರು, ಚಾಮರಾಜ ಕ್ಷೇತ್ರ, ಮೈಸೂರು.
5. ಮಾನ್ಯ ವಿಧಾನಸಭಾ ಸದಸ್ಯರು, ನರಸಿಂಹರಾಜ ಕ್ಷೇತ್ರ, ಮೈಸೂರು.
6. ಮಾನ್ಯ, ವಿಧಾನಸಭಾ ಸದಸ್ಯರು, ಚಾಮುಂಡೇಶ್ವರಿ ಕ್ಷೇತ್ರ, ಮೈಸೂರು.
7. ಶ್ರೀ ಡಿ. ಪದ್ಮನಾಭ, ಅಧ್ಯಕ್ಷರು, ಛೇರ್‌ಮೆನ್, ಜಿಲ್ಲಾ ಪ್ಲಾನಿಂಗ್ ಕಮಿಟಿ, ಮೈಸೂರು.
8. ಶ್ರೀ ಹೆಚ್.ಎನ್.ಶ್ರೀಕಂಠಯ್ಯ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ನಗರಪಾಲಿಕೆ ಸದಸ್ಯರು, ಮೈಸೂರು.
9. ಶ್ರೀ ಬಿ.ಎಲ್.ಭೈರಪ್ಪ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ನಗರಪಾಲಿಕೆ ಸದಸ್ಯರು, ಮೈಸೂರು.
10. ಶ್ರೀ ಎಂ.ಜಯಶಂಕರಸ್ವಾಮಿ, ಜಿಲ್ಲಾ ಪ್ಲಾನಿಂಗ್ ಕಮಿಟಿ ಮೆಂಬರ್, ಮೈಸೂರು.
11. ಮಾನ್ಯ ಮಹಾಪೌರರು, ಮೈಸೂರು ನಗರಪಾಲಿಕೆ, ಮೈಸೂರು.
12. ಮಾನ್ಯ ಉಪ ಮಹಾ ಪೌರರು, ಮೈಸೂರು ನಗರಪಾಲಿಕೆ, ಮೈಸೂರು.
13. ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ದಿ ಇಲಾಖೆ, ಕರ್ನಾಟಕ ಸರ್ಕಾರ 4ನೇ ಮಹಡಿ, ವಿಕಾಸಸೌಧ, ಬೆಂಗಳೂರು.
14. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, 4ನೇ ಮಹಡಿ, ವಿಕಾಸ ಸೌಧ, ಬೆಂಗಳೂರು.
15. ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರು.
16. ವ್ಯವಸ್ಥಾಪಕ ನಿರ್ದೇಶಕರು, ಕೆ.ಯು.ಐ.ಡಿ.ಎಫ್.ಸಿ. ಸಿಲ್ವರ್ ಜ್ಯುಬಲಿ ಬ್ಲಾಕ್, 2ನೇ ಮಹಡಿ, Unity ಕಟ್ಟಡ, 3ನೇ ಅಡ್ಡರಸ್ತೆ, ಮಿಷನ್ ರಸ್ತೆ, ಬೆಂಗಳೂರು.
17. ವ್ಯವಸ್ಥಾಪಕ ನಿರ್ದೇಶಕರು, ಕೆ,ಯು,ಡಬ್ಲ್ಯೂ.ಎಸ್, ಮತ್ತು ಡಿ.ಬಿ., ನಂ. 6, ಜಲಭವನ, 1ನೇ ಹಂತ, 1ನೇ ಸ್ಟೇಜ್, ಬಿ.ಟಿ.ಎಂ. ಬಡಾವಣೆ, ಬನ್ನೇರುಘಟ್ಟ ರಸ್ತೆ, ಬೆಂಗಳೂರು 560029.
18. ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ.ನಿ., ಕೆಂಗಲ್ ಹನುಮಂತಯ್ಯ ಜೋಡಿ ರಸ್ತೆ, ಶಾಂತಿನಗರ, ಬೆಂಗಳೂರು.
19. ಆಯುಕ್ತರು, ಪಾರಾಂಪರಿಕ ಇಲಾಖೆ, ಅರ್ಕ್ಯಾಲಜಿ ಮ್ಯೂಸಿಯಂ ಮತ್ತು ಪಾರಂಪರಿಕ, ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರ್ಬಾ ರಸ್ತೆ, ಬೆಂಗಳೂರು.19.
20. ಆಯುಕ್ತರು, ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ,ಬೆಂಗಳೂರು – 1.

II ಪ್ರತಿಯನ್ನು ಈ ಕೆಳಕಂಡವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

1. ಆಯುಕ್ತರು, ಮೈಸೂರು ನಗರಪಾಲಿಕೆ, ಮೈಸೂರು.
2. ಆಯುಕ್ತರು, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು.
3. ಆಯುಕ್ತರು, ಕೊಳಚೆ ನಿರ್ಮೂಲನ ಮಂಡಳಿ, ಶೇಷಾದ್ರಿಪುರಂ, ಬೆಂಗಳೂರು.
4. ಉಪ ವಿಭಾಗಾಧಿಕಾರಿಗಳು, ಮೈಸೂರು.
5. ಅಧೀಕ್ಷಕ ಇಂಜಿನಿಯರ್, ಮೈಸೂರು ನಗರಪಾಲಿಕೆ, ಮೈಸೂರು.
6. ವಿಭಾಗೀಯ ನಿಯಂತ್ರಣಾಧಿಕಾರಿ, ಕ.ರಾ.ರ.ಸಾ.ನಿ., ಮೈಸೂರು.
7. ಕಾರ್ಯಪಾಲಕ ಇಂಜಿನಿಯರ್, ಕೆ,ಯು,ಡಬ್ಲ್ಯೂ.ಎಸ್, ಮತ್ತು ಡಿ.ಬಿ., ನಗರವಿಭಾಗ (ಜೆಎನ್ ನರ್ಮ್) ಯಾದವಗಿರಿ, ಮೈಸೂರು.
8. ಕಾರ್ಯಪಾಲಕ ಇಂಜಿನಿಯರ್, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಮೈಸೂರು.
9. ಕಾರ್ಯಪಾಲಕ ಇಂಜಿನಿಯರ್, ಕ.ರಾ.ರ.ಸಾ.ನಿ.,, ಮೈಸೂರು ಗ್ರಾಮಾಂತರ ವಿಭಾಗ, ಬನ್ನಿಮಂಟಪ, ಮೈಸೂರು.
10. ಉಪ ನಿರ್ದೇಶಕರು, ಪಾರಂಪರಿಕ ಇಲಾಖೆ, ಮೈಸೂರು.
11. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಮೈಸೂರು.

ಜಿಲ್ಲಾಧಿಕಾರಿಗಳು ಮತ್ತು ವಿಶೇಷಾಧಿಕಾರಿಗಳು
ಜವಹರ್‌ಲಾಲ್ ನೆಹರು ರಾಷ್ಟ್ರೀಯ ಪುನರುಜ್ಜೀವನ ಯೋಜನೆಯ

ಮೈಸೂರು.